
ವರ್ತನೆಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಅಗತ್ಯವಿಲ್ಲ. 'Burden of History' ಕಲ್ಪಿತ ಸಂಗತಿಯೇ ವಾಸ್ತವವೇನೂ ಅಲ್ಲ. ಪ್ರತಿಯೊಬ್ಬ ಮನುಷ್ಯನೂ ತನ್ನ ಪ್ರತಿಕ್ಷಣದ ಒಳತುಡಿತಗಳಿಂದಲೇ ಬದುಕನ್ನು ಕಟ್ಟಿಕೊಳ್ಳುವುದು ಸಾಧ್ಯವಾಗಬೇಕು. ಸಮುದಾಯಗಳು ಮತ್ತು ವ್ಯಕ್ತಿಗಳು ಅಂತಹ ಹೇರುವಿಕೆಯನ್ನು ನಿರಾಕರಿಸುವುದು ಕೇವಲ ಸಹಜ. ಇಷ್ಟಕ್ಕೂ ಕಳೆದ ಕಾಲದ ಸಾಹಿತ್ಯಕೃತಿಗಳಲ್ಲಿ ನಮ್ಮ ಕಾಲದ ಸಮಸ್ಯೆಗಳಿಗೆ ಸಿದ್ಧವಾದ ಉತ್ತರಗಳಿವೆಯೆಂಬ ತಿಳಿವಳಿಕೆಯು ಸರಿಯಲ್ಲ. ಇದ್ದರೂ ಅವುಗಳನ್ನು ಆಚರಣೆಗೆ ತಂದು ಎಲ್ಲವನ್ನೂ ಸರಿಪಡಿಸಿಕೊಳ್ಳಬಹುದೆಂಬ ಅನಿಸಿಕೆಯು ಭ್ರಮೆ. ಆದ್ದರಿಂದ ಪಂಪನಾಗಲೀ ವಚನಕಾರರಾಗಲೀ ರಾಮಬಾಣಗಳಲ್ಲ. ಆದರೆ, ಸರಿಯಾಗಿ ಗ್ರಹಿಸಿದಾಗ ಅವು ನಮ್ಮ ತಿಳಿವಳಿಕೆಯ ಮೇರೆಗಳನ್ನು ವಿಸ್ತರಿಸುತ್ತವೆ. ಆ ಕಾವ್ಯಗಳೊಂದಿಗೆ ನಾವು ಆಡುವ ಜಗಳಗಳು ಕೂಡ ನಮಗೆ ಮುಖ್ಯವಾಗುತ್ತವೆ.

ಆದರೂ ಹಳೆಯ ಕಾವ್ಯಗಳನ್ನು ಓದುವ ಬಗೆಗಳನ್ನು ಸರಿಯಾಗಿ ತಿಳಿದುಕೊಳ್ಳುವುದು ಬಹಳ ಮುಖ್ಯ. ಪ್ರತಿಯೊಂದು ಕಾಲವೂ ತನ್ನ ಮೇಲೆ ಇರುವ ಒತ್ತಡಗಳು ಮತ್ತು ತನ್ನ ಸ್ವರೂಪಕ್ಕೆ ಅನುಗುಣವಾಗಿ ಅಂತಹ ಬಗೆಗಳನ್ನು ರೂಪಿಸಿಕೊಳ್ಳುತ್ತದೆ. ಇವು ಫಿಲ್ಟರುಗಳ ಹಾಗೆ ಕೆಲಸಮಾಡಿ, ಕೆಲವು ಸಂಗತಿಗಳನ್ನು ಒಳಗೆ ತೆಗೆದುಕೊಂಡರೆ, ಬೇರೆ ಕೆಲವು ಹೊರಗಡೆಯೇ, ಉಳಿದುಬಿಡುತ್ತವೆ. ಇಂಥ ಆಧುನಿಕ ಓದುಗಳಿಂದ ನೆರವು ಪಡೆಯುತ್ತಲೇ ಅವುಗಳಿಂದ ಬಿಡಿಸಿಕೊಳ್ಳುವ ಹಾದಿಗಳನ್ನೂ ಹುಡುಕಬೇಕು. ಅದರಲ್ಲಿಯೂ ಪಾಶ್ಚಾತ್ಯ ಶಿಕ್ಷಣ ಮತ್ತು ಸಾಹಿತ್ಯಮೀಮಾಂಸೆಯ ಫಲವಾದ ಓದಿನ ಬಗೆಗಳು ಕೂಡ ಇಂತಹ ಸಮಸ್ಯೆಗಳಿಗೆ ಕಾರಣವಾಗಿವೆ. ಪಂಪನಂತಹ ಕವಿಯ ಓದಿಗೆ ಕೂಡ ಇಂಥ ಬಣ್ಣದ ಕನ್ನಡಕಗಳು ಅಡ್ಡಿಯಾಗಿವೆ.



ಮೊದಲನೆಯದಾಗಿ ಪಂಪನ ಕಾವ್ಯಗಳನ್ನು ಸಮಗ್ರವಾಗಿ ಓದುವ ಬದಲು, ಸಂಗ್ರಹಗಳಲ್ಲಿ, ಬಿಡಿ ಬಿಡಿಯಾದ ಸನ್ನಿವೇಶಗಳಲ್ಲಿ, ಗದ್ಯಾನುವಾದಗಳಲ್ಲಿ, ವಿಮರ್ಶೆಯ ಕಿಟಕಿಗಳ ಮೂಲಕ ಮತ್ತು 'ಮೇಷ್ಟ್ರು ಪಾಠ'ದ ಸೀಮಿತತೆಗಳಲ್ಲಿ ಓದುವ ಅಭ್ಯಾಸವು ಮೊದಲಿನಿಂದಲೂ ಬೆಳೆದುಬಂದಿದೆ. ಅವನ ಹಳಗನ್ನಡವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾದಂತೆಲ್ಲ ಇಂತಹ 'ಶಾರ್ಟ್ ಕಟ್'ಗಳು ಹೆಚ್ಚಾಗುತ್ತಿವೆ. ಈ ಎಲ್ಲ ಓದಿನ ಬಗೆಗಳು ಅವನ ಸರಿಯಾದ ಗ್ರಹಿಕೆಗೆ ಅಡ್ಡಿಯಾಗಬಹುದು. ಎರಡನೆಯದಾಗಿ, ನಮ್ಮ ಕಾಲದ ಮುಖ್ಯ ತಿಳಿವಳಿಕೆಗಳಾದ ಧರ್ಮ ನಿರಪೇಕ್ಷತೆ, ಮಾನವತಾವಾದ ಮತ್ತು ಇತಿಹಾಸನಿಷ್ಠ ಅಧ್ಯಯನಗಳು ಪಂಪನ ಬೆಲೆಕಟ್ಟುವ ಅಳತೆಗೋಲುಗಳಾಗಿ ಕೆಲಸಮಾಡಿವೆ. ಅಥವಾ ಇವೆಲ್ಲದರ ಜೊತೆಗೆ ಸೌಂದರ್ಯಾತ್ಮಕವಾದ ಹುಡುಕಾಟಗಳದೇ ಮೇಲುಗೈ ಆಗಿದೆ. ಅವನ ಲೋಕದರ್ಶನದೊಳಗೆ ಇರಬಹುದಾದ, ಎಲ್ಲ ಕಾಲಕ್ಕೂ ಸಲ್ಲುವ ಸಂಗತಿಗಳ ಕಡೆಗೆ ಯೋಚಿಸಿರುವುದು ಕಡಿಮೆ. ಹಾಗೆಯೇ ಪಂಪನು ಜೈನನೆಂಬ ಸಂಗತಿಯು 'ಆದಿಪುರಾಣ' ಮತ್ತು 'ಪಂಪ ಭಾರತ'ಗಳಿಗೆ ಸಿಕ್ಕಿರುವ ಮಹತ್ವವನ್ನು ಕೂಡ ಕಂಟ್ರೋಲ್ ಮಾಡಿರುವುದನ್ನು ನಾವು ಬಲ್ಲೆವು. ತೀರ ಈಚಿನವರೆಗೂ 'ಆದಿಪುರಾಣ'ವು ಹಿನ್ನೆಲೆಗೆ ಸರಿದು, ಪಂಪ ಭಾರತವು ಮುಖ್ಯವೆನಿಸಿತ್ತು. 'ಧಾರ್ಮಿಕ'ವೆಂದು ಕರೆಯಲಾಗುವ, ಸಾಹಿತ್ಯಿಕ ಪಠ್ಯವು ಧರ್ಮದ ಸೀಮಿತತೆಗಳನ್ನು ಮೀರಿ ಬೇರೇನೋ ಆಗುವ ಬಗೆಗಳನ್ನು ನಾವು ಬಲ್ಲೆವು. ಆದರೂ ನಮ್ಮ ಓದುಗ/ಕೇಳುಗರು ಅವುಗಳನ್ನು ನೋಡಿದ ಬಗೆಯಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಗಳಾಗಿವೆ. ಹಾಗೆ ನೋಡಿದರೆ, ಒಂದು ಧರ್ಮಕ್ಕೆ ಸೇರಿದ ಲೇಖಕ–ವಾಚಕರ ಗುಂಪುಗಳು ಇತರ ಗುಂಪುಗಳ ಸಾಹಿತ್ಯದ ಬಗ್ಗೆ ಬರೆದಿದ್ದು ಬಹಳ ಕಡಿಮೆ. ಒಂದೊಮ್ಮೆ ಬರೆದರೂ ಟೀಕೆ–ಟಿಪ್ಪಣಿಗಳು ಮಾತ್ರವೇ. ಈ ಮಾತಿಗೆ ವಚನಕಾರರೂ ಸೇರಿದಂತೆ ಯಾರೂ ಹೊರತಲ್ಲ. ಆದ್ದರಿಂದಲೇ ಜಾತಿ–ಧರ್ಮಗಳ ಚೌಕಟ್ಟುಗಳನ್ನು ಮೀರಿದ ಓದುಗಳು ಇಪ್ಪತ್ತನೆಯ ಶತಮಾನದ ವಿಶಿಷ್ಟ ಲಕ್ಷಣ. ಈಗಲೂ ಕೂಡ ಜೈನಸಾಹಿತ್ಯ, ವೀರಶೈವ ಸಾಹಿತ್ಯ ಮತ್ತು